◆ **ಕೊಲೆಗಾರ ಯಾರು ಎನ್ನುವ ಕುತೂಹಲವೇ 'The Big Sleep' ಕಾದಂಬರಿಯನ್ನು ಓದಿಸಿಕೊಂಡು ಹೋಗುವ ಶಕ್ತಿ.**

ಕತೆ ಬರೆಯಲು ಆರಂಭಿಸಿದಾಗ ಮುಂದೇನಾಗುತ್ತದೆ ಎಂದಾಗಲಿ, ಕತೆಯ ಕೊನೆಯಾಗಲಿ ಗೊತ್ತಿರುವುದಿಲ್ಲ. ಅದರಲ್ಲೇನಾದರೂ ಮರ್ಡರ್ ಕೇಸ್ ಇದ್ದರೆ ಕೊಲೆಗಾರ ಯಾರು ಅಂತ ನನಗೂ ಗೊತ್ತಿರುವುದಿಲ್ಲ. ಪುಸ್ತಕ ಬರೆಯುವುದು ಅದನ್ನು ಕಂಡುಹಿಡಿಯಲು. ಕೊಲೆಗಾರ ಯಾರು ಅಂತ ಮೊದಲೇ ಗೊತ್ತಿದ್ದರೆ ಪುಸ್ತಕ ಬರೆಯುವ ಅವಶ್ಯಕತೆಯೇ ಇರುವುದಿಲ್ಲ.

◆ **ಕನಸನ್ನು ವಿಶ್ಲೇಷಿಸಲು ಶುರುಮಾಡಿದರೆ ಅದರ ಘಮಲು ಕಡಿಮೆಯಾಗುತ್ತದೆ. ಇಂತಹದ್ದೇ ಕಾರಣಕ್ಕೆ ಪುಸ್ತಕವನ್ನು ವಿವರಿಸುವುದಿಲ್ಲವೇ?**

ಪುಸ್ತಕಗಳನ್ನು ಬರೆಯುವುದರಿಂದ ಆಗುವ ಒಂದೊಳ್ಳೆ ಅನುಭವವೆಂದರೆ ನೀವು ಎಚ್ಚರವಿರುವಾಗಲೇ ಕನಸು ಕಾಣಬಹುದು. ನಿದ್ದೆಯಲ್ಲಿ ಕಾಣುವ ಕನಸಾದರೆ ನೀವದನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಪುಸ್ತಕ ಬರೆಯಲು ಕೂತಾಗ ನೀವು ಎಚ್ಚರವಿರುತ್ತೀರಿ. ನಿಮ್ಮ ಸಮಯ, ಎಷ್ಟು ಹೊತ್ತು ಬರೆಯಲು ಕೂರುವಿರಿ ಹೀಗೆ ಬಹಳಷ್ಟು ನಿಮ್ಮದೇ ಆಯ್ಕೆಗಳು ಇರುತ್ತವೆ.. ಬೆಳಗ್ಗೆ ಹೊತ್ತು ನಾಲ್ಕರಿಂದ ಐದು ಗಂಟೆಗಳ ಕಾಲ ಬರೆಯುತ್ತೇನೆ. ನಿಲ್ಲಿಸಬೇಕು ಅನ್ನಿಸಿದಾಗ ನಿಲ್ಲಿಸುತ್ತೇನೆ. ಮಾರನೆಯ ದಿನ ಪುನಃ ಮುಂದುವರೆಸುತ್ತೇನೆ. ನಿಜವಾದ ಕನಸಿನಲ್ಲಿ ಇದು ಸಾಧ್ಯವಿಲ್ಲ.

◆ **ಪರಿಷ್ಕರಣೆಯ ಮುಖ್ಯ ಉದ್ದೇಶವೇನು? ಮೊದಲು ಬರೆದ ಭಾಗಗಳನ್ನು ಮತ್ತೆ ತಿದ್ದಿ ಬರೆಯುವುದು ಅನಿವಾರ್ಯವೇ?**

ಹೌದು. ಮೊದಲ ಸಲ ಬರೆದಾಗ ಅದು ಗೋಜಲಾಗಿರುತ್ತದೆ. ಮತ್ತೆ ಮತ್ತೆ ತಿದ್ದಿ ಬರೆಯಲೇಬೇಕು.

◆ **ಸಾಮಾನ್ಯವಾಗಿ ಎಷ್ಟು ಸಲ ತಿದ್ದಿ ಬರೆಯುವಿರಿ?**

ನಾಲ್ಕರಿಂದ ಐದು. ಮೊದಲ ಕರಡನ್ನು ಬರೆಯಲು ಸುಮಾರು ಆರು ತಿಂಗಳು ತೆಗೆದುಕೊಳ್ಳುತ್ತೇನೆ. ಆಮೇಲೆ ಏಳರಿಂದ ಎಂಟು ತಿಂಗಳು ಅದನ್ನು ತಿದ್ದಿ ಬರೆಯುತ್ತೇನೆ.

◆ **ಅಷ್ಟು ಬೇಗ ಮುಗಿಸುವಿರಾ?**

ನಾನು ಶ್ರಮಜೀವಿ. ಕಾದಂಬರಿ ಬರೆಯುವಾಗ ಅದು ಬಿಟ್ಟು ಬೇರೇನೂ ಕೆಲಸ ಮಾಡುವುದಿಲ್ಲ.

◆ **ನಿಮ್ಮ ದಿನಚರಿ ಏನು?**

ಕಾದಂಬರಿ ಬರೆಯುತ್ತಿರುವಾಗ ಬೆಳಗಿನ ಜಾವ ನಾಲ್ಕಕ್ಕೆ ಎದ್ದು ಐದರಿಂದ ಆರು ಗಂಟೆ ಕೂತು ಬರೆಯುತ್ತೇನೆ. ಮಧ್ಯಾಹ್ನ 10 ಕಿ.ಮೀ. ಓಡುತ್ತೇನೆ ಇಲ್ಲವೇ 1,500 ಮೀಟರ್ ಈಜುತ್ತೇನೆ. ಕೆಲವೊಮ್ಮೆ ಎರಡನ್ನೂ ಮಾಡುತ್ತೇನೆ. ಆಮೇಲೆ ಸ್ವಲ್ಪ ಹೊತ್ತು ಕೂತು ಓದುತ್ತೇನೆ. ಸಂಗೀತ ಕೇಳುತ್ತೇನೆ. ರಾತ್ರಿ ಒಂಬತ್ತು ಗಂಟೆಗೆ ಮಲಗುತ್ತೇನೆ. ಇದನ್ನು ವ್ರತದಂತೆ ಒಂದಿಷ್ಟು ಬದಲಿಸದೆ ಮಾಡುತ್ತೇನೆ. ಈ ರೀತಿಯ ಪುನರಾವರ್ತನೆ ಬಹಳ ಮುಖ್ಯಸಂಗತಿ. ಅದೊಂದು ರೀತಿಯ ಸಮ್ಮೋಹನವಿದ್ದಂತೆ. ಮನಸ್ಸಿನ ಆಳವನ್ನು ತಲುಪಲು ನನ್ನನ್ನು ನಾನೇ ಸಮ್ಮೋಹನಗೊಳಿಸಿಕೊಳ್ಳುತ್ತೇನೆ. ಈ ವ್ರತದಂತಹ ದಿನಚರಿಯನ್ನು ಆರುತಿಂಗಳಿಂದ ಹಿಡಿದು ವರ್ಷದವರೆಗೂ ಮಾಡಲು ಮಾನಸಿಕ ಹಾಗೂ ದೈಹಿಕ ದೃಢತೆ ಬಹಳ ಮುಖ್ಯ. ಆ ರೀತಿಯಲ್ಲಿ ನೋಡಿದಾಗ ಕಾದಂಬರಿ ಬರೆಯುವುದು ಒಂದು ರೀತಿಯಲ್ಲಿ